**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ ಕುಣಿಗಲ್</u>**

# ಸಿ.ಸಿ. 1035/2019

| | |
|---|---|
| ಸಾಕ್ಷಿದಾರರ ಹೆಸರು | : ರಂಗಪ್ಪ ಕೆ ವಿ |
| ತಂದೆಯ ಹೆಸರು | : ವೆಂಕಟ ಶೆಟ್ಟಯ್ಯ |
| ವಯಸ್ಸು | : 67 ವರ್ಷ |
| ಉದ್ಯೋಗ | : ಏನು ಇಲ್ಲ |
| ವಾಸ | : ಅಗ್ರಹಾರ,ಕುಣಿಗಲ್. |

**<u>ಸಾಕ್ಷಿಯನ್ನು ದಿನಾಂಕ:20.12.2025ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿಪಿ.2** ಎಂದು, ಅದರಲ್ಲಿನ ಸಹಿಯನ್ನು **ನಿ.ಪಿ.2(ಬಿ)** ಎಂದು ಗುರುತಿಸಲಾಯಿತು. ನಿಪಿ.2ಕ್ಕೆ ಸಹಿಯನ್ನು ದಿನಾಂಕ 23.07.2019ರಂದು ಸುಮಾರು 2 ಅಥವಾ 2.30 ರ ಸಮಯದಲ್ಲಿ ಗ್ರಾಮದೇವತೆ ದೇವಸ್ಥಾನದ ಹತ್ತಿರ ಸಹಿ ಮಾಡಿರುತ್ತೇನೆ. ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ಮತ್ತು ವ್ಯಾನ್ ಚಾಲಕ ಗಲಾಟೆ ಮಾಡಿಕೊಂಡಿರುವ ವಿಚಾರವಾಗಿ ಸಹಿ ಮಾಡಿರುತ್ತೇನೆ. ನಿಪಿ.2 ಕ್ಕೆ ನನ್ನ ಜೊತೆ ಚಾಸಾ.6 ರವರು ಸಹಿ ಮಾಡಿರುತ್ತಾರೆ.

**( ಈ ಹಂತರದಲ್ಲಿ ಮಾನ್ಯ ಸ. ಸ. ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲಿಗೆ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಮಾನ್ಯ ಸ.ಸ. ಅ ರವರಿಂದಃ</u>**

ಆ ದಿನ ಮಧ್ಯಾಹ್ನ 2.00 ರಿಂದ 3.00 ರವರೆಗೆ ಪೋಲಿಸರು Karnataka steel

ಅಂಗಡಿ ಬಳಿ ಘಟನಾ ಸ್ಥಳದ ಪಂಚನಾಮೆ ಮಾಡಿದ್ದರು ಎಂದರೆ ಸರಿ. ಸದರಿ ಪಂಚನಾಮೆಯನ್ನು ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ಮತ್ತು ಆರೋಪಿತರ ನಡುವೆ ಗಲಾಟೆ ಯಾದ ವಿಚಾರಕ್ಕೆ ಮಾಡಲಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಚಾಸಾ.1 ರವರು ಸಹ ಇದ್ದರು ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

**<u>ಪಾಟೀ ಸವಾಲುಃಆರೋಪಿ ಪರ ಶ್ರೀ ಕೆ ಎಸ್ ಎ ವಕೀಲರಿಂದಃ</u>**

ನಿಪಿ.2ರ ವಿಚಾರವನ್ನು ಠಾಣೆಯಲ್ಲಿ ಸಹಿ ಮಾಡುವಾಗ ಹೇಳಿರುತ್ತಾರೆ ಎಂದರೆ ಸರಿ. ಈ ಪ್ರಕರಣದ ಘಟನೆಯ ಬಗ್ಗೆ ಏನು ಗೊತ್ತಿಲ್ಲ ಎಂದರೆ ಸರಿ. ನಿಪಿ.2ರಲ್ಲಿ ಸಹಿ ಮಾಡುವಾಗ ಪೊಲೀಸರು ಓದಿ ಹೇಳಿರುತ್ತಾರೆ. ನಿಪಿ.2 ನಾನು ಸಹಿ ಮಾಡಿದಾಗ, ಖಾಲಿ ಇತ್ತು ಎಂದರೆ ಸರಿಯಲ್ಲ. ನಿಪಿ.2ರ ವೇಳೆ ನನ್ನ ಜೊತೆ ಯಾರು ಇರಲಿಲ್ಲ ಎಂದರೆ ಸರಿಯಲ್ಲ. Karnataka steel ಅಂಗಡಿ ಹಾಸನ ಬೆಂಗಳೂರು ರಸ್ತೆಯಲ್ಲಿರುತ್ತದೆ. Karnataka steel ಅಂಗಡಿ ಗೂ ಗ್ರಾಮ ದೇವತೆ ದೇವಸ್ಥಾನಕ್ಕೂ 1000 ಅಡಿ ಅಂತರವಿದೆ ಎಂದರೆ ಸಾಕ್ಷಿಯು 100 ಅಡಿ ಇದೆ ಎಂದು ನುಡಿಯುತ್ತಾರೆ. 2019ರಲ್ಲಿ ಗ್ರಾಮ ದೇವತೆ ದೇವಸ್ಥಾನ Karnataka steel ಅಂಗಡಿ ಬಳಿ ಇರಲಿಲ್ಲ ಎಂದರೆ ಸಾಕ್ಷಿಯು ತಾನು ಗ್ರಾಮ ದೇವತೆ ದೇವಸ್ಥಾನ ಸರ್ಕಲ್ ನಲ್ಲಿ ಸಹಿ ಮಾಡಿದ್ದೆ ಎಂದು ನುಡಿಯುತಾರೆ. Karnataka steel ಅಂಗಡಿ ಬಳಿ ಗ್ರಾಮ ದೇವತೆ ದೇವಸ್ಥಾನ ಇರದೇ ಅದು, ದೊಡ್ಡಪೇಟೆ ಮೂಲೆಯಲ್ಲಿತ್ತು ಎಂದರೆ ಸರಿಯಲ್ಲ.

2. ನಾನು ಕೆ ಎಸ್ ಆರ್ ಟಿ ಸಿ ಚಾಲಕನಾಗಿದ್ದೆ ಎಂದರೆ ಸರಿ. ನಿಪಿ.2ರ ದಿನಾಂಕದಂದು ನಾನು ಬಸ್ ಚಾಲಕನಾಗಿ ಕರ್ತವ್ಯದಲ್ಲಿದ್ದೆ ಎಂದರೆ ಸಾಕ್ಷಿಯು ತಾನು ನಿವೃತ್ತಿಯಾಗಿದ್ದೆ ಎಂದು

ನುಡಿಯುತ್ತಾರೆ. ಚಾಸಾ.1 ರವರು ನನ್ನ ಸೋದರ ಅಳಿ ಎಂದರೆ ಸಾಕ್ಷಿಯು ತಾನು ದೂರದ ಸಂಬಂಧಿ ಎಂದು ನುಡಿಯುತ್ತಾರೆ. ನಿಪಿ.2 ರ ವಿಚಾರ ಗೊತ್ತಿಲ್ಲದಿದ್ದರೂ ಚಾಸಾ.1 ರವರ ಮಾತು ಕೇಳಿ ಅದಕ್ಕೆ ಸಹಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್